ಅಸಲ ದಾವಾ ನಂ: 290/2012
ಡಿ.ಡಬ್ಲ್ಯು.11

**<u>ಮದ್ಯಂತರ ಅರ್ಜಿ ಆದೇಶದ ಮೇರೆಗೆ ಇಂದು ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>**

ನಾನು ಈ ದಿನ ನ್ಯಾಯಾಲಯಕ್ಕೆ ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಅವುಗಳನ್ನು ಈ ಕೆಳಗಿನಂತೆ ನಿಶಾನೆಗಳನ್ನಾಗಿ ಗುರುತಿಸಲಾಯಿತು.

| | |
|---|---|
| ನಿಡಿ.189 | ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ನ್ಯಾಯಾಲಯದಲ್ಲಿ APPCR-114/2012-13 ನೇದ್ದರ ರೋಜನಾಮೆಯ ದೃಡಿಕೃತ ಪ್ರತಿ ( 04 ಪುಟಗಳು) |
| ನಿ.ಡಿ.190 | ನಿಡಿ.189 ನೇದ್ದಕ್ಕೆ ಸಂಂಬಧಿಸಿದ ಅಪೀಲು ಮೆಮೋದ ದೃಡಿಕೃತ ನಕಲು |
| ನಿಡಿ.191 | ಸದರಿ ಪ್ರಕರಣದಲ್ಲಿ ಸಲ್ಲಿಸಿದ ಅರ್ಜಿಯ ದೃಡಿಕೃತ ನಕಲು |
| ನಿಡಿ.192 | ಸದರಿ ಪ್ರಕರದಲ್ಲ್ಕಿ ಸಲ್ಲಿಸಿದ ತಕರಾರಿನ ದೃಡಿಕೃತ ನಕಲು |
| ನಿಡಿ.193 | ಸದರಿ ಪ್ರಕರಣದಲ್ಲಿ ಹೊರಡಿಸಿದ ಮದ್ಯಂತರ ಆದೇಶ ಮತ್ತು ಅಂತಿಮ ಆದೇಶದ ದೃಡಿಕೃತ ನಕಲುಗಳು |

**<u>ಪಾಟೀಸವಾಲುಃ ವಾದಿ ಪರ ಶ್ರೀ. ಎಮ್ ಆರ್ ಬಿ ವಕೀಲರಿಂದಃ-</u>**

ನಿಡಿ.188 ಹಾಗೂ ನಿಡಿ.193 ರಂತೆ ಹೊರಡಿಸಿದ ಆದೇಶದ ವಿರುದ್ಧ ಪ್ರತಿವಾದಿ ನಂಬರ 3(ಎ) ದಿಂದ (ಸಿ) ರವರು ತಮ್ಮ ಪ್ರತಿವಾದ ಪತ್ರದಲ್ಲಿ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಸದರಿ ಪ್ರಕರಣದಲ್ಲಿ ವಾದಿಯು ದಾವಾ ಆಸ್ತಿಯ ಅನುಕ್ರಮ ಸಂಖ್ಯೆ-26 ಸಿ ಟಿ ಎಸ್ ನಂಬರ 3200/2ಎ/27 ನೇದ್ದು ಒಟ್ಟು ಕುಟುಂಬದ ಆಸ್ತಿ ಇರುತ್ತದೆಂದು ಹೇಳಿ ಮೆಲ್ಮನವಿ ಸಲ್ಲಿಸಿದ್ದ ಎಂದರೆ ನಿಜ. ಸದರಿ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಇರುವುದಾಗಿ ಹಾಗೂ ಸದರಿ ಆಸ್ತಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿ ಇರುವುದಾಗಿ

ಹೇಳಿ ವಾದಿಯು ಸದರಿ ಪ್ರಕರಣದಲ್ಲಿ ಪ್ರಮಾಣಪತ್ರವನ್ನು ಸಹ ಸಲ್ಲಿಸಿದ್ದನು ಎಂದರೆ ನಿಜ. ಸದರಿ ಪ್ರಕರಣದಲ್ಲಿ ನಮ್ಮ ಪರವಾಗಿ ವಕೀಲರು ಮೇಲೆ ಹೇಳಿದ ಆಸ್ತಿಯು ನಮಗೆ ಅಸಲು ದಾವಾ ನಂಬರ 524/2012 ರಲ್ಲಿ ಆದ ಡಿಕ್ರಿಯಂತೆ ಬಂದಿರುತ್ತದೆಂದು ಹೇಳಿ ತಕರಾರು ತಕರಾರು ಸಲ್ಲಿಸಿದ್ದೇವು ಎಂದರೆ ನಿಜ. ಸದರಿ ಅಸಲು ದಾವಾ ನಂಬರ 524/2012 ನೇದ್ದಕ್ಕೆ ನಾನು ಮತ್ತು 4 ನೇ ಪ್ರತಿವಾದಿ ಮಾತ್ರ ಪಕ್ಷಗಾರರು ಇದ್ದೇವು. ಸದರಿ ಪ್ರಕರಣಕ್ಕೆ ವಾದಿಯ ಪಕ್ಷಗಾರನಾಗಿರಲಿಲ್ಲ ಎಂದರೆ ನಿಜ.

ದಾವಾ ಆಸ್ತಿಯ ಅನುಕ್ರಮ ಸಂಖ್ಯೆ-26 ಸಿ ಟಿ ಎಸ್ ನಂಬರ 3200/2ಎ/27 ನೇದ್ದರಲ್ಲಿ ನಾವು ಕಟ್ಟಡ ಮಾಡಲು ವಾದಿ ತಕರಾರು ಮಾಡದಂತೆ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ನಂಬರ 925/2012 ನೇದ್ದನ್ನು ಆತನ ವಿರುದ್ಧ ದಾಖಲಿಸಿದ್ದೇವು ಎಂದರೆ ನಿಜ. ಪ್ರಸ್ತುತ ಪ್ರಕರಣ ಅಂದರೆ ಅಸಲು ದಾವಾ ನಂಬರ 290/2012 ನೇದ್ದು ಚಾಲ್ತಿಯಲ್ಲಿದ್ದರಿಂದ ಮೇಲೆ ಹೇಳಿದ ಅಸಲು ದಾವಾ ನಂಬರ 925/2012 ವಜಾ ಗೊಂಡಿರುತ್ತದೆಂದರೆ ನನಗೆ ಮಾಹಿತಿ ಇಲ್ಲ.

ಸದರಿ ಅಸಲು ದಾವಾ ನಂಬರ 925/2012 ರಲ್ಲಿ ಪ್ರತಿವಾದಿ ನಂಬರ 3(ಎ) ದಿಂದ (ಸಿ) ರವರು ತಮ್ಮ ಪ್ರತಿವಾದ ಪತ್ರ ಪ್ರಸ್ತುತ ದಾವೆ ಚಾಲ್ತಿಯಲ್ಲಿದ್ದ ಬಗ್ಗೆ ಹೇಳಿರುವುದಿಲ್ಲ ಎಂದರೆ ನಿಜ.

ಮೇಲೆ ಹೇಳಿದ ನಿಡಿ.189 ರಂತೆ ಹಾಜರುಪಡಿಸಿದ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರ ನ್ಯಾಯಾಲಯದಲ್ಲಿ APPCR-114/2012-13 ನೇದ್ದರಲ್ಲಿ ನಮ್ಮ ಪರ ವಕೀಲರು ಗೈರು ಹಾಜರು ಇದ್ದುದರಿಂದ ಪ್ರಕರಣವನ್ನು ಆದೇಶಕ್ಕೆ ಮುಂದೂಡಿರುತ್ತಾರೆಂದರೆ ನಿಜ. ಪ್ರಸ್ತುತ ಪ್ರಕರಣ ಚಾಲ್ತಿಯಲ್ಲಿದ್ದರಿಂದ ಹಾಗೂ

ಮಧ್ಯಂತರ ಆದೇಶವಾಗಿರುವುದರಿಂದ ಜಿಲ್ಲಾಧಿಕಾರಿಗಳು ನಿಡಿ.193 ನೇದ್ದರಂತೆ ಮಧ್ಯಂತರ ಆದೇಶ ಹೊರಡಿಸಿ ತಡೆಯಾಜ್ಞೆ ತೆರವುಗೊಳಿಸಿರುತ್ತಾರೆಂದರೆ ನಿಜ.

ಸಿ ಟಿ ಎಸ್ ನಂಬರ 936/ಬಿ ನೇದ್ದನ್ನು ಸನ್ 1984 ರಲ್ಲಿ ನನ್ನ ತಂದೆಯ ಹೆಸರಿಗೆ ಖರೀದಿಸುವ ಕಾಲಕ್ಕೆ ಆತನ ಅಣ್ಣತಮ್ಮಂದಿರರ ಮಧ್ಯೆ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಾಟ್ನಿಯಾಗಿರಲಿಲ್ಲ ಎಂದರೆ ನಿಜ. ಸದರಿ ಸಿ ಟಿ ಎಸ್ ನಂಬರ 936/ಬಿ ನೇದ್ದರ ಮೂಲ ಖರೀದಿ ಪತ್ರ ಎಲ್ಲಿ ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿ ಖರೀದಿ ಪತ್ರದ ದೃಡಿಕೃತ ನಕಲನ್ನು ಪಡೆಯಲು ನಾವು ಸನ್ 2025 ರಲ್ಲಿ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ನಿಜ. ಸದರಿ ಖರೀದಿ ಪತ್ರದ ಮೂಲ ಪ್ರತಿ ನಮ್ಮ ಬಳಿ ಇರದೇ ಇದ್ದ ಕಾರಣ ದೃಡಿಕೃತ ಪ್ರತಿಯನ್ನು ಪಡೆಯಲು ಅರ್ಜಿ ಸಲ್ಲಿಸಿದ್ದೇವು ಎಂದರೆ ನಿಜ. ನಮ್ಮ ಪ್ರತಿವಾದ ಪತ್ರದಲ್ಲಾಗಲೀ ಅಥವಾ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಾಗಲೀ ಮೂಲ ಖರೀದಿ ಪತ್ರ ಎಲ್ಲಿ ಇರುತ್ತದೆ ಹಾಗೂ ಏನು ಆಗಿರುತ್ತದೆ ಎನ್ನುವ ಬಗ್ಗೆ ವಿವರಣೆ ನೀಡಿರುವುದಿಲ್ಲ ಎಂದರೆ ನಿಜ. ನಿಡಿ.184 ಮತ್ತು ನಿಡಿ.185 ರಂತೆ ಹಾಜರುಪಡಿಸಿದ ದೃಡಿಕೃತ ಖೇರಿದಿ ಪತ್ರಗಳಲ್ಲಿ ನಮ್ಮ ತಂದೆಯ ಉದ್ಯೋಗ ವ್ಯಾಪಾರ ವ ಶೇತ್ಕಿ ಇರುವುದಾಗಿ ತೋರಿಸಿರುತ್ತಾರೆಂದರ ನಿಜ. ಸದರಿ ನಿಡಿ.184 ಮತ್ತು ನಿಡಿ.185 ರಂತೆ ಸ್ವತ್ತುಗಳನ್ನು ಖರೀದಿಸುವಾಗಿ ನಮ್ಮ ತಂದೆ ಹಾಗೂ ಆತನ ಸಹೋದರರ ಮಧ್ಯೆ ಪಾಲು ವಿಭಾಗ ಇರುವ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ನಿಜ. ಸದರಿ ಎರಡೂ ಖರೀದಿ ಪತ್ರಗಳು ಆಗುವ ಸಮಯದಲ್ಲಿ ನಮ್ಮ ಅಜ್ಜ ಈರಪ್ಪ ಬದುಕಿದ್ದ ಎಂದರೆ ನಿಜ. ಆ ಸಮಯದಲ್ಲಿ ನಮ್ಮ ಅಜ್ಜ ಈರಪ್ಪ ತನ್ನ ಎಲ್ಲಾ ಮಕ್ಕಳಿಗೆ ಕುಟುಂಬದ ಆಸ್ತಿಗಳನ್ನು ಹಂಚಿಕೆ ಮಾಡಿ ಕೊಟ್ಟಿರಲಿಲ್ಲ ಎಂದರೆ ನಿಜ.

ನಿಡಿ.181 ರಂತೆ  ಸಿ ಟಿ ಎಸ್ ನಂಬರ 936/ಬಿ ನೇದ್ದಕ್ಕೆ ನನ್ನ ಹಾಗೂ 4 ನೇ ಪ್ರತಿವಾದಿಯ ಹೆಸರುಗಳು ದಿ.05.07.2014 ರಂದು ಅಂದರೆ ಪ್ರಸ್ತುತ ದಾವೆ ಚಾಲ್ತಿಯಲ್ಲಿರುವಾಗ ದಾಖಲಾಗಿರುತ್ತವೆ ಎಂದರೆ ನಿಜ. ಆ ಸಮಯದಲ್ಲಿ ಪ್ರಸ್ತುತ ಪ್ರಕರಣದಲ್ಲಿ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿಯಾಗಲೀ, ಪ್ರತಿವಾದಿಯರಾಗಲೀ ಯಾವುದೇ ಹಕ್ಕು ಬದಲಾವಣೆ ಮಾಡುವುದಾಗಲೀ, ಮಾರಾಟ ಮಾಡುವುದಾಗಲೀ ಮಾಡದಂತೆ ನ್ಯಾಯಾಲಯದ ಪ್ರತಿಬಂಧಕಾಜ್ಞೆ ಇತ್ತು ಎಂದರೆ ನಿಜ.  ಸದರಿ ಸಂಗತಿ ನನಗೆ  ಗೊತ್ತಿತ್ತು ಎಂದರೆ ನಿಜ. ನಿಡಿ.181 ರಲ್ಲಿ ದಾಖಲಿಸಿದಂತೆ ಅಪಸಾತ ವಾಟ್ನಿಯಾದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಸದರಿ ವಾಟ್ನಿ ಪತ್ರಕ್ಕೆ ನಮ್ಮ ತಂದೆ, ನಾನು ಮತ್ತು 4 ನೇ ಪ್ರತಿವಾದಿಯನ್ನು ಹೊರತುಪಡಿಸಿ ವಾದಿಯಾಗಲೀ, ಉಳಿದ ಪ್ರತಿವಾದಿಯರಾಗಲೀ ಪಕ್ಷಗಾರರು ಆಗಿರುವುದಿಲ್ಲ. ನಿಡಿ.181 ರಲ್ಲಿ ಸದರಿ ಸ್ವತ್ತು ನನ್ನ ಹೆಸರಿಗೆ ವರದಿ ಆಧಾರದ ಮೇರೆಗೆ ದಾಖಲಾದ ಬಗ್ಗೆ ಉಲ್ಲೇಖ ಇರುತ್ತದೆಂದರೆ ನಿಜ. ಆ ಬಗ್ಗೆ ವಾಟ್ನಿ ಪತ್ರವನ್ನಾಗಲೀ, ವರದಿ ವ ಜವಾಬ ಹೇಳಿಕೆಯನ್ನಾಗಲೀ ಹಾಜರುಪಡಿಸಿರುವುದಿಲ್ಲ ಎಂದರೆ ನಿಜ.  ಸದರಿ ಆಸ್ತಿಯಲ್ಲಿ ವಾದಿಗೆ  ಪಾಲು ಹೋಗುತ್ತದೆಂದು ತಿಳಿದು, ನ್ಯಾಯಾಲಯದ ಮಧ್ಯಂತರ ಆದೇಶವನ್ನು ಉಲ್ಲಂಘನೆ ಮಾಡಿ, ಸದರಿ ಆಸ್ತಿಯನ್ನು ನಮ್ಮ ಹೆಸರಿಗೆ ಬದಲಾವಣೆ  ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.  ಸದರಿ ವಾಟ್ನಿ ಪತ್ರದಂತೆ ಮೇಲೆ ಹೇಳಿದ ಸಿ ಟಿ ಎಸ್ ನಂಬರ 936 ನೇದ್ದಕ್ಕೆ ಸಂಬಂಧಿಸಿದಂತೆ ನನಗಾಗಲೀ, 4 ನೇ ಪ್ರತಿವಾದಿಗಾಗಲೀ ಯಾವುದೇ ಮಾಲೀಕತ್ವ ಪ್ರಾಪ್ತಿಯಾಗಿರುವುದಿಲ್ಲ ಹಾಗೂ ನಾವು ಸದರಿ ಆಸ್ತಿಯ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಅನುಕ್ರಮ ಸಂಖ್ಯೆ-26 ಸಿ ಟಿ ಎಸ್ ನಂಬರ 3200/2ಎ/27 ನೇದ್ದನ್ನು ಖರೀದಿಸುವ ಕಾಲಕ್ಕೆ ನನ್ನ ತಂದೆಗೆ ವೈಯಕ್ತಿಕವಾಗಿ ಆದಾಯ ಇತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ. 1 ನೇ ಪ್ರತಿವಾದಿ ಹಾಗೂ ಆತನ ತಂದೆ ಅಕ್ಕಿಸಾಗರದಿಂದ ಗೋಕಾಕಕ್ಕೆ ಯಾವಾಗ ಬಂದು ನೆಲೆಸಿರುತ್ತಾರೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ನಾನು ಇನ್ನೂ ಜನಿಸಿರಲಿಲ್ಲ. ಆ ಸಮಯದಲ್ಲಿ ನಮ್ಮ ತಂದೆ ಹಾಗೂ ಆತನ ಸಹೋದರರು ಜನಿಸಿದ್ದರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ಸನ್ 1955 ರಲ್ಲಿ ದಾವಾ ಆಸ್ತಿ ಸಂಖ್ಯೆ -5 ಸಿ ಟಿ ಎಸ್ ನಂಬರ 3226 ನೇದ್ದು ನಮ್ಮ ಮುತ್ತಜ್ಜನಾದ ಕೋಣಪ್ಪ ಶಂಕರೆಪ್ಪ ಅಂಕದವರ ಹೆಸರಿಗೆ ದಾಖಲು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸನ್ 1958 ರಲ್ಲಿ ಸದರೀ ಆಸ್ತಿಯು ಕೋಣಪ್ಪ ತೀರಿಕೊಂಡ ನಂತರ ಆತನ ಒಬ್ಬನೇ ಮಗನಾದ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ನಂತರ 1ನೇ ಪ್ರತಿವಾದಿ ತನ್ನ ಹೆಸರಿನೊಂದಿಗೆ ತನ್ನ ಎಲ್ಲಾ ಗಂಡು ಮಕ್ಕಳ ಹೆಸರನ್ನು ಸದರಿ ಆಸ್ತಿಗೆ ಸಾಮೂಹಿಕವಾಗಿ ದಾಖಲಿಸಿರುತ್ತಾನೆಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 11 ನೇ ಪ್ರತಿವಾದಿಯ ಆಸ್ತಿಗಳ ಕುರಿತು ಹೇಳಿದ್ದು, ಆ ಬಗ್ಗೆ ಹೇಳಲು ನಾನು ಆತನಿಂದ ಯಾವುದೇ ಅಧಿಕಾರ ಪತ್ರವನ್ನು ಪಡೆದಿರುವುದಿಲ್ಲ.

1 ನೇ ಪ್ರತಿವಾದಿ ಚಹಾ ವ್ಯಾಪಾರ, ಐಸ್ ಕ್ಯಾಂಡಿ ವ್ಯಾಪಾರ ಮಾಡುತ್ತಿರುವ ಬಗ್ಗೆ ನಾನು ನೋಡಿರುವುದಿಲ್ಲ. 2 ನೇ ಪ್ರತಿವಾದಿ ಪಟಾಕ್ಷಿ ವ್ಯಾಪಾರ ನಡೆಸುವ ಕಾಲಕ್ಕೆ 1 ನೇ ಪ್ರತಿವಾದಿ ತನ್ನ ಮಕ್ಕಳ ಮದ್ಯೆ ವಾಟ್ನಿ ಮಾಡಿ ಕೊಟ್ಟಿರುತ್ತಾರಾ? ಎಂದರೆ ಸಾಕ್ಷಿಯು ಆ ಸಮಯದಲ್ಲಿ ಯಾವುದೇ ಆಸ್ತಿಗಳು ಇರಲಿಲ್ಲ ಎಂದು

ನುಡಿಯುತ್ತಾರೆ. 2 ನೇ ಪ್ರತಿವಾದಿ ತನ್ನ ಹೆಸರಿಗೆ ಟ್ರಕ್‌ನ್ನು ಖರೀದಿಸಿರುವ ಬಗ್ಗೆ ಅದರ ಆರ್ ಸಿ ಪುಸ್ತಕ ಹಾಜರುಪಡಿಸಿರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಯರು ರಸ್ತೆ ಬದಿಯಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಿದ್ದ ಬಗ್ಗೆ ನನ್ನ ಬಾಯಿ ಹೇಳಿಕೆಯನ್ನು ಹೊರತುಪಡಿಸಿ ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ಸದರಿ ವ್ಯಾಪಾರದಿಂದ ಒಳ್ಳೆಯ ಆದಾಯ ಇತ್ತೆಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. 3 ನೇ ಪ್ರತಿವಾದಿ ಯಾರ ಅಂಗಡಿಯನ್ನು ಬಾಡಿಗೆಗೆ ಪಡೆದು ಬಟ್ಟೆ ವ್ಯಾಪಾರ ಪ್ರಾರಂಭಿಸಿರುತ್ತಾನೆಂದು ನನಗೆ ಗೊತ್ತಿಲ್ಲ. ಆ ಬಗ್ಗೆ ಬಾಡಿಗೆ ಪತ್ರ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

**ಪಾಟೀಸವಾಲುಃ ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ